ಸಿಕ್ಕಿದ್ದು ಅಂದುಕೊಂಡಷ್ಟು ಸುಲಭವಾಗಿರಲಿಲ್ಲ. ಇದಾಗಿ ಹದಿನೈದು ವರ್ಷವಾಗಿದ್ದರೂ ರೆಪ್ಪೆ ಮುಚ್ಚಿದರೆ ನಿನ್ನೆಯಷ್ಟೇ ನಡೆದಂತವಳಿಗೆ. ಆಗವಳಿಗೆ ಬಾಲಾಜಿಯ ಜೊತೆ ರಾಮಚಂದ್ರನ ಪಡಿಯಚ್ಚಿನ ಮಗಳು ಭುವಿಯೊಬ್ಬಳಿದ್ದಳು. ಭುವಿಯಿಂದಲೂ ಅವಳಿಗೆ ಸಿಕ್ಕ ಸಂತೋಷ, ದೊರಕಿದ ಸಂಭ್ರಮ ಅವಳು ಹೆಚ್ಚಿನ ಶ್ರೇಣಿಯಲ್ಲಿ ಬೈಯೋಕೆಮಿಸ್ಟ್ರಿ ವಿಭಾಗದಲ್ಲಿ ಡಿಗ್ರಿ ಮುಗಿಸಿದಾಗ, ಅನಂತರ ಅವಳು ನೆಗೆದದ್ದು ಅಮೆರಿಕಕ್ಕೆ. ಇಲ್ಲಿನ ಜನ, ಊರಿಗಿಂತ ಕೆರಿಯರ್ ದೃಷ್ಟಿಯಿಂದ ಇಲ್ಲಿನ ವಾತಾವರಣ ನರಕವೆನಿಸಿತ್ತವಳಿಗೆ. ಅನಂತರದ ಮದುವೆಯೂ ಅಷ್ಟೇ. ತಾನು ಆಶೀರ್ವಾದ ಮಾಡಿದ್ದು ಬಿಟ್ಟರೆ ಉಳಿದದ್ದೆಲ್ಲ ಅವಳದೇ ನಿರ್ವಹಣೆ. ಉಳಿದಂತೆ ಸಂಬಂಧದ ಸೇತು ಫೋನಿನಲ್ಲಿ ಮಾತ್ರ. ಸದ್ಯದ ಪರಿಸ್ಥಿತಿಗೆ ಯಾವ ಬಗೆಯಲ್ಲೂ ಅವಳು ನೇರವಾಗಿ ಕಾರಣವಾಗಿರಲಿಲ್ಲ. ಅವಳ ಅಪೇಕ್ಷೆಗಳೂ ಸಾಮಾನ್ಯ ಸಂಸಾರಸ್ಥ ಹೆಣ್ಣೊಬ್ಬಳು ಮಾಡುವಂಥವುಗಳಷ್ಟೇ. ಸುಮಾರು ಐದೂವರೆ ಅಡಿ ಎತ್ತರದ ಮಾಸಿದ ಕಂದು ಬಣ್ಣದ ಆಕೆಯನ್ನು ಹತ್ತು ಅಡಿ ದೂರದಿಂದ ನೋಡಿದರೆ ಸಾಮಾನ್ಯರಲ್ಲಿ ಸಾಮಾನ್ಯ ಎನಿಸುವುದು ತೀರ ಸರಿ. ಆದರೆ ಅವಳೆದುರು ಹತ್ತಿರಕ್ಕೆ ಬಂದರೆ ಹೊಳಪು ಕಣ್ಣುಗಳು ಗೌರವ ಕೊಡಬೇಕೆಂದು ಬಲವಂತ ಪಡಿಸುತ್ತವೆ.

'ಠಣ್' ಎಂದು ಕಾಲಿಂಗ್ ಬೆಲ್ ಸರಸೂಳನ್ನು ನೆಲಕ್ಕೆಳೆಯಿತು.

ಬಾಗಿಲು ತೆಗೆದಾಗ ಎದುರುಗಡೆ ಮನೆಯ ಶಾರದಮ್ಮ ಆಗಲೇ ತಿಳಿಸಿದ್ದ ಸಂಬಂಧಿಕರ ಮದುವೆ ಏರ್ಪಾಡಿನಲ್ಲಿರುವುದನ್ನು ಮತ್ತೆ ಹೇಳಿ, 'ಈ ಪ್ರಿಯಾಗೆ ನೀನೂ ಬಂದ್ಬಿಡೆ ಅಂದ್ರೆ ಕೇಳ್ತಿಲ್ಲ, ಎಕ್ಸಾಂ ಹತ್ತಿರ ಇದೆ, ಬರಲ್ಲ ಅಂತ ಕೂತಿದಾಳೆ... ನಾಳೆ ದಿನ ನೀವೂ ಅವ್ಳ ಜೊತೆ ಬನ್ನಿ' ಎಂದರು.

'ಆಗ್ಲಿ ಅದಕ್ಕೇನು... ಊಟಕ್ಕೆ ಬರ್ಲಿ ಅವ್ಳು... ಕರಿತೀನಿ.'

'ಬೇಡ... ಮಾಡಿಟ್ಟಿದೀನಿ' ಎಂದು ಹೊರಟರು ಶಾರದಮ್ಮ ಉಳಿದವರ ಜೊತೆ.

ಹಿಂದೆಯೇ ಬಂದವನು ನ್ಯೂಸ್ ಪೇಪರ್ ಏಜೆಂಟ್. ಕಳೆದ ತಿಂಗಳ ಬಿಲ್ ಮುಂದೆ ಹಿಡಿದ.

'ಏನ್ ನಿಮ್ಮ ಹುಡುಗ್ರು, ಪೇಪರ್ ಸರೀಗೆ ಹಾಕ್ತಿಲ್ಲ... ಬಂದಿಲ್ಲ ಅಂತ ನೋಡ್ಕೊಂಡು ಫೋನ್ ಮಾಡಿದ ಮೇಲೆ ಕಳಿಸ್ತೀರ' ಎಂದಳು ಸರಸೂ ಅಸಮಾಧಾನದಿಂದ.

'ಮಾಮೂಲಿನೋರು ಬರ್ದಿದ್ದಾಗ ಹೊಸ ಹುಡುಗ್ರನ್ನ ಕಳಿಸಬೇಕಾಗತ್ತೆ... ಹೇಳಿರ್ತೀವಿ... ಮರ್ತು ಬಿಡ್ತಾರೆ...' ಎಂದು ಹಲ್ಕಿರಿದ.

'ಮತ್ತೆ... ಮತ್ತೆ ಆದ್ರೆ ಬೇರೆಯವರಿಗೆ ಹೇಳ್ತಿನಷ್ಟೇ.'

'ಇನ್ಮೇಲೆ ಹಂಗಾಗಲ್ಲ ಬಿಡಿ' ಎಂದ.

ಪ್ರಿಯಾ ನಾಗೇಂದ್ರನಿಗಿಂತಲೂ ರಾತ್ರಿ ಹೊತ್ತು ಹೆಚ್ಚು ಸಮಯ ಓದುತ್ತಿದ್ದಳು. ಹೆಚ್ಚು ಕಡಿಮೆ ಪ್ರತಿರಾತ್ರಿಯೂ ಒಮ್ಮೆ ಎದ್ದು ಮೂತ್ರ ವಿಸರ್ಜನೆಗೆ ಹೋಗುವ ಅಭ್ಯಾಸವಿದ್ದ ಸರಸೂಗೆ ಕತ್ತು ಅತ್ತ ತಿರುಗಿಸಿದಾಗ ಒಂದೂವರೆಯ ತನಕವೂ ಅಭ್ಯಾಸ ಮಾಡುತ್ತಿದ್ದದ್ದು ಕಾಣುತ್ತಲೇ ಇರುತ್ತದೆ. ಅವಳ ಪರಿಶ್ರಮದ ಬಗ್ಗೆ ಮೆಚ್ಚುಗೆಯಿತ್ತು. ಈ ಹುಡುಗಿಯೇ ಕೆಲವು ವರ್ಷ ದೊಡ್ಡವಳಾಗಿದ್ದರೆ ಬಾಲಾಜಿಗೆ ತಂದುಕೊಳ್ಳಬಹುದಿತ್ತೇನೋ ಎನ್ನುವ ಆಲೋಚನೆ ಬಂದು ತನ್ನ ಹುಚ್ಚು ಹಂಬಲಕ್ಕೆ ನಸುನಕ್ಕಿದ್ದಳು. ಜೊತೆಗೆ ತಾವು ಹೇಗಿರಲಿ ಎಲ್ಲರೂ ಒಳ್ಳೆಯದನ್ನೇ ಅಲ್ಲವೇ ಅಪೇಕ್ಷೆ ಪಡುವುದು ಎಂದು ತನ್ನನ್ನೇ ಸಮರ್ಥಿಸಿಕೊಂಡಳು ಕೂಡ.

ಅಭ್ಯಾಸದಂತೆ ಟೀವಿ ಹಾಕಿ ಮತ್ತದೆ ಚರ್ವಿತ ಚರ್ವಣ ದೃಶ್ಯಗಳನ್ನು ಕಂಡು ಬೇಸರದಿಂದ